
ತಮ್ಮ ಸಂವೇದನೆಯಲ್ಲಿ ಆವಾಹಿಸಿಕೊಳ್ಳುತ್ತಾರೆ. ಶಂಕರ ಲಾಳಪೂರ ಎಂಬುವವರು ಇವರನ್ನು ಕಮ್ಯೂನಿಸ್ಟ್ ಪಾರ್ಟಿಗೆ ಪರಿಚಯಿಸುತ್ತಾರೆ. ರಾಮ ಮನೋಹರ ಲೋಹಿಯಾ ಈಗಾಗಲೇ ಕನ್ನಡದ ಸಾಹಿತ್ಯಿಕ ಮನಸ್ಸನ್ನು ಆವರಿಸಿಕೊಂಡಿದ್ದರು. ಅಂತೆಯೇ ಬೆಂಗಳೂರಿನಲ್ಲಿ ಸಮಾಜವಾದಿ ಯುವಜನ ಸಭೆ (ಎಸ್.ವೈ.ಎಸ್) ಮತ್ತು ಜಯಪ್ರಕಾಶ ನಾರಾಯಣ (ಜೆ.ಪಿ.) ಚಳವಳಿಗಳಲ್ಲಿ ಸಹ ಡಿಆರ್ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಮುಂದೆ ತಮ್ಮ ಮಿತ್ರ ದಲಿತ ಕವಿ ಸಿದ್ಧಲಿಂಗಯ್ಯನವರ ಜೊತೆಗೂಡಿ ದಲಿತ- ಬಂಡಾಯ ಸಾಹಿತ್ಯದ ಚಳವಳಿಗೆ ಹೊಸಧ್ವನಿಯನ್ನು ಸೇರಿಸುತ್ತಾರೆ. ಸಿದ್ಧಲಿಂಗಯ್ಯನವರ ಆತ್ಮಕತೆ 'ಊರುಕೇರಿ' ಅವರಿಬ್ಬರ ಸ್ನೇಹ ಮತ್ತು ಬೌದ್ಧಿಕ ಒಡನಾಟವನ್ನು ಬಿಚ್ಚಿಡುತ್ತದೆ. ಶೂದ್ರ ಮತ್ತು ದಲಿತ ಸಾಮಾಜಿಕ ಹಿನ್ನೆಲೆಯಿಂದ ಬಂದ ಆಗಿನ ಹಲವು ಲೇಖಕರಲ್ಲಿ ಡಿಆರ್ ಚುರುಕಾದ ರಾಜಕೀಯ ವಿಶ್ಲೇಷಕರಾಗಿ, ದಲಿತ- ಬಂಡಾಯ ಚಳವಳಿಯ ಸಿದ್ಧಾಂತಕಾರರಾಗಿ (ಥಿಯರಿಸ್ಟ್) ಹೊರ ಹೊಮ್ಮಿದರು.




ಯಾವುದೇ ಪಂಥದ ಕುರಿತು ಹಟಮಾರಿ ತಾತ್ವಿಕ ನಿಷ್ಠೆಯನ್ನು (ಡಾಗ್ಮ್ಯಾಟಿಸಮ್) ಅನುಮಾನದಿಂದ ನೋಡುತ್ತಿದ್ದ ಡಿಆರ್, ಪರ್ಯಾಯ ಆಲೋಚನೆಗಳತ್ತ ತಿರುಗಿದರು. ಖಡ್ಗದಂಥ ಹರಿತವಾದ ಭಾಷೆಯನ್ನು ಬದಿಗಿರಿಸಿ, ಭಾರತವನ್ನು ಎಲ್ಲರನ್ನೂ ಒಳಗೊಂಡ ಒಂದು ನಾಗರಿಕತೆಯಾಗಿ ನೋಡಲು ಪ್ರಾರಂಭಿಸಿದರು. ಇಂತಹ ಪರಿವರ್ತನೆಗಳು ಅವರ ಬೌದ್ಧಿಕ ಜೀವನದ ವಿಶಿಷ್ಟ ಅಂಶಗಳಾಗಿವೆ.

ಕುವೆಂಪು, ಕಾರಂತ, ದ.ರಾ. ಬೇಂದ್ರೆ, ಮಾಸ್ತಿ, ಜಿ.ಎಸ್. ಶಿವರುದ್ರಪ್ಪ, ಚಂದ್ರಶೇಖರ ಕಂಬಾರ, ಎಚ್.ಎಸ್. ಶಿವಪ್ರಕಾಶ ಮುಂತಾದ ಪ್ರಮುಖರ ಕೃತಿಗಳನ್ನು ವಿಶ್ಲೇಷಿಸುವ ಡಿಆರ್ ಅವರ ಚೊಚ್ಚಲ ವಿಮರ್ಶಾ ಸಂಕಲನ 'ಅಮೃತ ಮತ್ತು ಗರುಡ' ಬಾಹ್ಯವಾಗಿ ಸಾಂಪ್ರದಾಯಿಕ ಪ್ರಾಯೋಗಿಕ ವಿಮರ್ಶೆಯ ಚೌಕಟ್ಟನ್ನು ಹೋಲುತ್ತದೆ. ಆದರೆ, ಆಂತರಿಕವಾಗಿ ಇದು ಪಶ್ಚಿಮದ ವೈಚಾರಿಕ ಸಿದ್ಧಾಂತಗಳನ್ನು ಕನ್ನಡ ಸಾಹಿತ್ಯ ವಿಮರ್ಶೆಗೆ ಅನ್ವಯಿಸುವ ನೂತನ ಮಾರ್ಗವೊಂದರ ಹುಡುಕಾಟವೂ ಆಗಿದೆ. ಇಲ್ಲಿ ಅವರು ಸಾಹಿತ್ಯವನ್ನು ಬರೀ ಕಲಾತ್ಮಕ ರಚನೆಗಳಾಗಿ ಮಾತ್ರವಲ್ಲ, ಸಾಮಾಜಿಕ ನ್ಯಾಯದ ದೃಷ್ಟಿಕೋನದಿಂದ ವಿಮರ್ಶಿಸಬೇಕಾದ ಸಾಮಾಜಿಕ ದಾಖಲೆಗಳನ್ನಾಗಿ ಪರಿಗಣಿಸಿದ್ದಾರೆ. ಈ ಸಾಮಾಜಿಕ ನ್ಯಾಯದ ಪರಿಪ್ರೇಕ್ಷ್ಯದ ಮೇಲೆ ಮಾರ್ಕ್ಸ್‌ವಾದಿ ಚಿಂತಕರಾದ ಜಾರ್ಜ್ ಲೂಕಾಚ್, ಲೂಯಿ ಆಲ್ತ್ಯೂಸರ್ ಮತ್ತು ಜರ್ಮನಿಯ ಫ್ರಾಂಕ್‌ಫರ್ಟ್ ಪಂಥದ ವಿಮರ್ಶಾತ್ಮಕ ಸಿದ್ಧಾಂತದ ಗಾಢ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದು.

ಜಿ.ಎಸ್.ಎಸ್. ಅವರ ಮಾರ್ಗದರ್ಶನದಲ್ಲಿ ನಡೆಸಿದ ಡಿಆರ್ ಅವರ ಡಾಕ್ಟರೇಟ್ ಅಧ್ಯಯನ, 1987ರಲ್ಲಿ 'ಶಕ್ತಿ- ಶಾರದೆಯ ಮೇಳ: ಆಧುನಿಕ ಕನ್ನಡ ಕವಿತೆಯ ಅಧ್ಯಯನ' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ಈ ಸಂಪ್ರಬಂಧ ಆಧುನಿಕ ಕನ್ನಡ ಕವಿಗಳ ಕಾವ್ಯದ ಕೇಂದ್ರ ಕಾಳಜಿಗಳನ್ನು ಗುರುತಿಸಿ, ಕನ್ನಡ ಕಾವ್ಯಪ್ರಪಂಚವನ್ನು ಸೂಕ್ಷ್ಮ ಓದಿನ (ಕ್ಲೋಸ್ ರೀಡಿಂಗ್) ಮೂಲಕ ವಿಶ್ಲೇಷಿಸಿದೆ. ಇಲ್ಲಿ 'ಭೂಮಿ', 'ಕಾಲ', 'ಕಾಮ' ಮತ್ತು 'ಸಮಾಜ' — ಈ ನಾಲ್ಕು ಪ್ರಮುಖ ಅಂಶಗಳನ್ನು ಆಧುನಿಕ ಕನ್ನಡ ಕವಿತೆಯ ವಸ್ತುಸಾಮಗ್ರಿಯನ್ನಾಗಿ ಚರ್ಚಿಸಲಾಗಿದೆ. ಈ ಕೃತಿಯ ಮೂಲಕ ಡಿಆರ್ ಕೇವಲ ಕವಿತೆಗಳ ಅರ್ಥವನ್ನು ಮಾತ್ರವಲ್ಲ, ಕನ್ನಡ ಕಾವ್ಯದ ಗರ್ಭದಲ್ಲಿ ಅಡಗಿರುವ ಐತಿಹಾಸಿಕ ಹೋರಾಟಗಳು, ವಸಾಹತುಶಾಹಿ ಅನುಭವಗಳ ದಾಳಿ ಮತ್ತು ಭಾರತೀಯ ಸಂವೇದನಾಶೀಲತೆಯನ್ನು ಆಳವಾಗಿ ಪ್ರಭಾವಿಸಿದ ಆಧುನಿಕತೆಯ ರಚನೆಗಳನ್ನು ಹೆಕ್ಕಿ ತೋರಿಸುತ್ತಾರೆ. ಈ ಗ್ರಂಥ ರಚನೆಯಾಗುವ ಹೊತ್ತಿಗೆ 'ಸಾಹಿತ್ಯ ವಿಮರ್ಶೆ ಎಂದರೆ ಲೋಕ ವಿಮರ್ಶೆ' ಎಂಬುದನ್ನು ಡಿಆರ್ ಸ್ಪಷ್ಟವಾಗಿ ಕಂಡುಕೊಂಡಿದ್ದರು. ಇದೇ